ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಕುರಿತು ಪ್ರಧಾನಿ ಜೊತೆ ಚರ್ಚೆ

ಬಂಡಿ ಸಂಜಯಕುಮಾರ

ರಾಯಚೂರು, ಡಿ.27: ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗಾಗಿ ಸುದೀರ್ಘ ಹೋರಾಟ ನಡೆದಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಶೀಘ್ರದಲ್ಲಿಯೇ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಚರ್ಚಿಸುವುದಾಗಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ವಿಜಯಕುಮಾರ ತಿಳಿಸಿದ್ದಾರೆ.

ಜಿಲ್ಲಾ ಏಮ್ಸ್ ಹೋರಾಟ ಸಮಿತಿ ನಿಯೋಗ ಶುಕ್ರವಾರ ನಗರದ ಕೃಷಿ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಐಐಟಿಯಿಂದ ವಂಚಿತಗೊಂಡ ಮಹತ್ವಾಕಾಂಕ್ಷಿ ಜಿಲ್ಲೆ, ರಾಯಚೂರಿನಲ್ಲಿಯೇ ಏಮ್ಸ್ ಆರೋಗ್ಯ ಸಂಸ್ಥೆ ಮಂಜೂರಾತಿಗಾಗಿ ಸುದೀರ್ಘ 960 ದಿನಗಳಿಂದ ಹೋರಾಟ ನಡೆದಿದ್ದು, ಈ ನಿಟ್ಟಿನಲ್ಲಿ ಪ್ರಧಾನಮಂತ್ರಿ ಅವರೊಂದಿಗೆ ಚರ್ಚಿಸಿ ಮಂಜೂರು ಮಾಡಿಸುವಲ್ಲಿ ತಾವು ನಿರ್ಣಾಯಕ ಪಾತ್ರ ವಹಿಸಬೇಕು ಎಂದು ಹೋರಾಟ ಸಮಿತಿಯ ಸದಸ್ಯರು ಮನವಿ ಮಾಡಿದರು.

ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದ ಸಚಿವರು, ಏಮ್ಸ್ ಆರೋಗ್ಯ ಸಂಸ್ಥೆಗಾಗಿ ನಡೆದಿರುವ ಸುದೀರ್ಘ ಹೋರಾಟದ ಬಗ್ಗೆ ನನಗೆ ಗೊತ್ತಿದೆ. ಶೀಘ್ರದಲ್ಲಿ ಪ್ರಧಾನ ಮಂತ್ರಿ ಅವರನ್ನು ಭೇಟಿ ಮಾಡಿ ರಾಯಚೂರಿನಲ್ಲಿ ನಡೆದಿರುವ ಸುದೀರ್ಘ ಹೋರಾಟದ ಬಗ್ಗೆ ಮನವರಿಕೆ ಮಾಡುತ್ತೇನೆ. ಅದಲ್ಲದೇ ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವ ಕುರಿತು ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಗರ ಶಾಸಕ ಡಾ .ಶಿವರಾಜ ಪಾಟೀಲ, ಜಿಲ್ಲಾಧಿಕಾರಿ ನಿತಿಶ್ ಕೆ., ಏಮ್ಸ್ ಹೋರಾಟ ಸಮಿತಿ ಸಂಚಾಲಕರಾದ ಬಸವರಾಜ ಕಳಸ, ಅಶೋಕ ಕುಮಾರ ಜೈನ್, ಜಾನ್ ವೆಸ್ಲಿ, ಎಂ.ಆರ್ ಭೇರಿ, ಜಗದೀಶ ಪಾಟೀಲ ಪೂರತಿಪ್ಲಿ, ವಿನಯ ಕುಮಾರ್ ಚಿತ್ರಗಾರ, ಡಾ.ಎಸ್ .ಎಸ್ ಪಾಟೀಲ ಉಪಸ್ಥಿತರಿದ್ದರು.

ನಾಳೆ ಗೆಜೆಟೆಡ್ ಪ್ರೊಬೆಷನರ್ ಹುದ್ದೆಗಳ ಪೂರ್ವಭಾವಿ ಮರುಪರೀಕ್ಷೆ

ವಿಜಯನಗರ, ಡಿ.27: ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್‌ನ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಮರು ಪರೀಕ್ಷೆ ಡಿ.29ರಂದು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಹೊಸಪೇಟೆ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ನಡೆಯಲಿರುವ ಒಟ್ಟು 23 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲು ಸಿದ್ಧತೆ ಮಾಡಲಾಗಿದೆ. ಡಿ.29ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಪತ್ರಿಕೆ-1 ಮತ್ತು ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಪತ್ರಿಕೆ-2 ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಝೆರಾಕ್ಸ್ ಮತ್ತು ಕಂಪ್ಯೂಟರ್, ಸೈಬರ್ ಅಂಗಡಿಗಳನ್ನು ಮುಚ್ಚಲು ಆದೇಶ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸಪ್ನ ಪ್ರಕಾಶನದಿಂದ ಇಂದು 69ಕನ್ನಡ ಕೃತಿಗಳ ಲೋಕಾರ್ಪಣೆ

ಬೆಂಗಳೂರು, ಡಿ.27: ಸಪ್ನ ಪ್ರಕಾಶನ ಪ್ರಕಟಿಸಿರುವ 69 ಕನ್ನಡ ಪುಸ್ತಕಗಳನ್ನು ಲೋಕಾರ್ಪಣೆ ಕಾರ್ಯಕ್ರಮವು ಡಿ.28ರಂದು ನಗರದ ಕುಮಾರಕೃಪೆ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ಪುಸ್ತಕಗಳನ್ನು ರಾಜ್ಯಸಭೆ ಸದಸ್ಯೆ ಡಾ.ಸುಧಾಮೂರ್ತಿ ಲೋರ್ಕಾಪಣೆಗೊಳಿಸಲಿದ್ದು, ಹಿರಿಯ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸರಕಾರದ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ವಿಶ್ರಾಂತ ಕುಲಪತಿ ಮಲ್ಲೆಪುರಂ ಜಿ.ವೆಂಕಟೇಶ್ ಉಪಸ್ಥಿತರಿರುತ್ತಾರೆ ಎಂದು ಪ್ರಕಟನೆ ತಿಳಿಸಿದೆ.

ವಿಷ್ಣುವರ್ಧನ್ ಪುಣ್ಯಸ್ಮರಣೆ: ಡಿ.30ರಂದು ರಕ್ತದಾನ ಶಿಬಿರ

ಬೆಂಗಳೂರು, ಡಿ.27: ಸಾಹಸ ಸಿಂಹ, ನಟ ಡಾ.ವಿಷ್ಣುವರ್ಧನ್‌ರ 15ನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ವಿ.ಎಸ್ ಅಭಿಮಾನ್ ಡಾ. ವಿಷ್ಣುವರ್ಧನ ಪುಣ್ಯಭೂಮಿ ಟ್ರಸ್ಟ್ ವತಿಯಿಂದ ಡಿ.30ರಂದು ನಗರದ ಅಭಿಮಾನ್ ಸ್ಟುಡಿಯೋದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ರಾಜುಗೌಡ ಹೇಳಿದ್ದಾರೆ.

ಶುಕ್ರವಾರ ನಗರದ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ವಿಷ್ಣುವರ್ಧನ ಅವರ ದತ್ತು ಪುತ್ರ ಶ್ರೀಧರ್ ಮೂರ್ತಿ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಲಿದ್ದು, ವಿಷ್ಣುವರ್ಧನ ಸಮಾಧಿಯ 10 ಗುಂಟೆ ಪವಿತ್ರ ಸ್ಥಳದಲ್ಲಿ ಪೂಜಾ ಕಾರ್ಯಕ್ರಮ ಮತ್ತು ಅನ್ನಸಂತರ್ಪಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಗಳನ್ನು ನಡೆಸಲಾಗುವುದು. ಸುಮಾರು 10 ಸಾವಿರಕ್ಕೂ ಹೆಚ್ಚು ವಿಷ್ಣು ಅಭಿಮಾನಿಗಳು ಭಾಗಿಯಾಗಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ನಟ ರಮೇಶ್ ಭಟ್, ಸಾಮಾಜಿಕ ಸೇವಕ ಬಿ.ವೈ.ರಮೇಶ್, ನಾರಾಯಣ ಕೆ., ಸ್ನೇಹಾ ರಶ್ಮಿ ಸಾರಂಗ್, ಹರೀಶ್ ಗೌಡ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ರಾಜುಗೌಡ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳಾದ ಬಿ.ವೈ.ರಮೇಶ್, ಚಂದ್ರಹಾಸ್, ಮಧುಸೂದನ್, ಶ್ರೀಧರ್ ಮೂರ್ತಿ ಉಪಸ್ಥಿತರಿದ್ದರು.

ಮಕ್ಕಳ ರಕ್ಷಣೆಗೆ ತಳ ಮಟ್ಟದಿಂದಲೇ ಕಾರ್ಯಪ್ರವೃತ್ತರಾಗಬೇಕಿದೆ

ಕೆ.ನಾಗಣ್ಣ ಗೌಡ

ಸುಳ್ಯ, ಡಿ.27: ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಕೆಳ ಮಟ್ಟದ ಸಮಿತಿಗಳು ಹೆಚ್ಚು ಗಮನ ಹರಿಸಬೇಕು. ತಾಲೂಕು, ಗ್ರಾಪಂ, ಗ್ರಾಮ ಮಟ್ಟದ ಸಮಿತಿಗಳು ಹೆಚ್ಚಿನ ಗಮನ ಹರಿಸಿ ಮಕ್ಕಳ ಸಂರಕ್ಷಣೆಗೆ ಗಮನಹರಿಸಬೇಕು. ಮಕ್ಕಳ ಪೋಷಕರು, ಸಮಿತಿಯವರು ಈ ಬಗ್ಗೆ ಗಮನಹರಿಸಿದಾಗ ಸಮಸ್ಯೆಗಳು ಕಡಿಮೆ ಆಗಲಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣ ಗೌಡ ಹೇಳಿದ್ದಾರೆ.

ಅವರಿಂದು ಸುಳ್ಯದಲ್ಲಿ ಪತ್ರಕರ್ತರ ಜೊತೆ ಮಾತನಾಡಿದರು.

ಬಾಲ್ಯ ವಿವಾಹನ ತಡೆಗೆ ಸಮಿತಿಯಿದ್ದು, ಈ ಮೂಲಕ ಬಾಲ್ಯ ವಿವಾಹ ಆಗದಂತೆ ನೋಡಿ ಕೊಳ್ಳಬೇಕು. ಮಕ್ಕಳ ಗ್ರಾಮ ಸಭೆಗಳು, ಸಮಿತಿಗಳಿಂದ ಸಭೆಗಳು ಆಗುತ್ತಿದೆಯಾ ಎಂಬುದನ್ನು ಪರಿಶೀಲಿಸಲಾಗುವುದು. ನಡೆಯದಿದ್ದಲ್ಲಿ ಜಿಲ್ಲಾಡಳಿತ ಮೂಲಕ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಲಾಗುವುದು ಎಂದರು. ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಸಂಬಂಧಿಸಿದಂತೆ ಹೆಚ್ಚಿನ ಗಮನ ಹರಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಮಕ್ಕಳ ಆತ್ಮಹತ್ಯೆ ಹೆಚ್ಚಾಗುತ್ತಿರುವ ಬಗೆಗಿನ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಆತಂಕಕಾರಿ. ಯಾವುದೇ ಕಾರಣಕ್ಕೂ ಮಕ್ಕಳ ಮನಸ್ಸಿಗೆ ಆಘಾತ ಆಗುವ ಘಟನೆ ನಡೆಯದಂತೆ ಗಮನ ಹರಿಸಬೇಕು. ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸದ ಬಗ್ಗೆ ಮಾತ್ರ ತಿಳಿಸಬೇಕು. ಮಕ್ಕಳ ಶಾಲಾ ಶುಲ್ಕ ಪಾವತಿಸಿಲ್ಲ ಎಂದಾದರೆ ಅದನ್ನು ಮಕ್ಕಳ ಪೋಷಕರಲ್ಲಿ ವಿಚಾರಿಸಬೇಕೆ ವಿನಃ ಮಕ್ಕಳಲ್ಲಿ ಅಲ್ಲ, ಇದೇ ರೀತಿ ಮಕ್ಕಳಲ್ಲಿ ಪರಿಣಾಮ ಬೀರುವ ಯಾವುದೇ ಕಾರ್ಯ ಆಗಬಾರದು ಎಂದ ಅವರು, ಮಕ್ಕಳ ಬಗ್ಗೆ ಪೋಷಕರು ನಿಗಾ ಇಡಬೇಕು ಎಂದರು. ಈ ಸಂದರ್ಭ ಸಂಪಾಜೆ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಮಾಹಿತಿ ಪಡೆದಿದ್ದೇವೆ ಎಂದರು. ಸಿಡಿಪಿಒ ಶೈಲಜಾ, ಜಿಲ್ಲಾ ಸಮಿತಿ ಸದಸ್ಯ ಅಬೂಬಕರ್ ಜತೆಗಿದ್ದರು.

ರಾಯಚೂರು: ಅಮಿತ್ ಶಾ ವಿರುದ್ಧ ಪ್ರತಿಭಟನೆ

ರಾಯಚೂರು, ಡಿ.27: ಡಾ.ಬಿ.ಆರ್ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿ ದಲಿತಪರ ಹಾಗೂ ಪ್ರಗತಿಪರ ಸಂಘಟನೆಗಳಿಂದ ನಗರದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನಾ ಧರಣಿ ನಡೆಯಿತು.

ಅಮಿತ್ ಶಾ ಸಂಸತ್ತಿನಲ್ಲಿ ಮಾತನಾಡುವಾಗ ಅಂಬೇಡ್ಕರ್ ಅವರನ್ನು ವ್ಯಂಗ್ಯವಾಡಿದ್ದಾರೆ. ಅಂಬೇಡ್ಕರ್ ಅವರ ಹೆಸರು ಹೇಳುವುದು ವ್ಯಸನ ಎಂದು ಹೇಳಿದ್ದು ಖಂಡನಾರ್ಹ. ದಲಿತರಿಗೆ, ಮಹಿಳೆಯರಿಗೆ ಹಾಗೂ ಶೋಷಿತ ವರ್ಗಗಳಿಗೆ ಡಾ.ಬಿ.ಆರ್ ಅಂಬೇಡ್ಕರ್ ದಾರಿದೀಪವಾಗಿದ್ದಾರೆ. ನಮ್ಮೆಲ್ಲರಿಗೆ ಅವರೇ ದೇವರು. ನಿತ್ಯ ಅವರ ಸ್ಮರಣೆ ಮಾಡುತ್ತೇವೆ ಎಂದು ಸಂಘಟನೆಯ ಮುಖಂಡ ಎಸ್. ಮಾರೆಪ್ಪ ಹೇಳಿದರು.

ಅಂಬೇಡ್ಕರ್ ಅವರ ಅವಹೇಳನ ದೇಶದಲ್ಲಿ ಕೂಮು ಪ್ರಚೋದನೆಗೆ ಕಾರಣವಾಗಬಹುದು. ಕೂಡಲೇ ಅಮಿತ್ ಶಾ ಅವರನ್ನು ಕೇಂದ್ರ ಗೃಹ ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರಾದ ರವೀಂದ್ರ ನಾಥ ಪಟ್ಟಿ, ಹೇಮರಾಜ ಅಸ್ಕಿಹಾಳ, ಎಂ.ಈರಣ್ಣ, ಆಂಜನೇಯ ಊಟ್ಕೂರು, ನರಸಿಂಹಲು ಮರ್ಚಟಾಳ, ಶ್ರೀನಿವಾಸ ಕಲವಲದೊಡ್ಡಿ, ವಿಜಯರಾಣಿ, ಖ್ವಾಜಾ ಅಸ್ಲಂ ಪಾಷಾ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಆನ್‌ಲೈನ್ ವೇದಿಕೆಗಳಿಂದ ಅನುಮತಿ ದುರುಪಯೋಗ: ಆರೋಪ 'ಮನೆಬಾಗಿಲಿಗೆ ಔಷಧಿ ವಿತರಣೆ'ಗೆ ಅನುಮತಿ ಹಿಂಪಡೆಯಲು ಎಐಒಸಿಡಿ ಮನವಿ

ಮಂಗಳೂರು, ಡಿ.27: ಕೋವಿಡ್ ಸಂದರ್ಭದಲ್ಲಿ ಔಷಧಿಗಳನ್ನು ಮನೆ ಬಾಗಿಲಿಗೆ ವಿತರಿಸಲು ನೀಡಲಾಗಿದ್ದ ವಿಶೇಷ ಅನುಮತಿಯನ್ನು ಅಕ್ರಮ ಆನ್‌ಲೈನ್ ವೇದಿಕೆಗಳು ದುರುಪಯೋಗ ಪಡಿಸುತ್ತಿದ್ದು, ಇದು ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನುಂಟುಮಾಡುತ್ತಿದೆ. ಈ ಅನುಮತಿಯನ್ನು ತಕ್ಷಣವೇ ಹಿಂಪಡೆಯುವಂತೆ ಅಖಿಲ ಭಾರತ ಔಷಧಿ ವ್ಯಾಪಾರಿಗಳ ಸಂಘ (ಎಐಒಸಿಡಿ) ಕೇಂದ್ರ ಸರಕಾರವನ್ನು ಒತ್ತಾಯಿಸಿ ಮನವಿ ಸಲ್ಲಿಸಿದೆ.

ರಾಜ್ಯ ಮತ್ತು ಭಾರತಾದ್ಯಂತದ ಎಲ್ಲಾ ಔಷಧಿ ಮಾರಾಟಗಾರರು ಹಾಗೂ ವಿತರಕರನ್ನು ಪ್ರತಿನಿಧಿಸುವ ದ.ಕ. ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗಳಿಗೆ ಮೂರನೇ ಸಲ ಪತ್ರ ಬರೆದಿದ್ದು, ಕೋವಿಡ್ ವೇಳೆ ಜಾರಿಗೊಂಡಿದ್ದ ಅಧಿಸೂಚನೆಯನ್ನು ಹಿಂಪಡೆಯುವಂತೆ ಮನವಿ ಮಾಡಿದೆ.

ಆನ್‌ಲೈನ್ ಅನುಮತಿಗೆ ಸಂಬಂಧಿಸಿ ಅಧಿಸೂಚನೆಯನ್ನು 2020ರ ಮಾರ್ಚ್‌ನಲ್ಲಿ ಪ್ರಕಟಿಸಲಾಗಿತ್ತು. ತುರ್ತು ಪರಿಸ್ಥಿತಿಯಡಿಯಲ್ಲಿ ಔಷಧಿ ಉತ್ಪಾದನೆ, ಮಾರಾಟ ಮತ್ತು ವಿತರಣೆಯನ್ನು ನಿಯಂತ್ರಿಸಲು ಡ್ರಗ್ಸ್ ಕಾಯ್ದೆಯಡಿ ಕೆಲ ಷರತ್ತುಗಳೊಂದಿಗೆ ಔಷಧಿಗಳನ್ನು ಮನೆಬಾಗಿಲಿಗೆ ವಿತರಿಸುವುದಕ್ಕೆ ಅನುಮತಿ ನೀಡಲಾಗಿತ್ತು. ಇದರಡಿ, ಔಷಧಿಗಳ ಮಾರಾಟಕ್ಕಾಗಿ ಪ್ರಿಸ್ಕಿಪ್ಷನ್ ಮೇಲೆ ಮುದ್ರಣ ಅಗತ್ಯ (ನಿಯಮ 65) ತಾತ್ಕಾಲಿಕವಾಗಿ ನಿರ್ಲಕ್ಷಿಸಲಾಗಿತ್ತು.

ಈ ಅಧಿಸೂಚನೆಯ ಪ್ರಮುಖ ಉದ್ದೇಶವು ತುರ್ತು ಪರಿಸ್ಥಿತಿಗಳಲ್ಲಿ ಸ್ಥಳೀಯ ಔಷಧಿ ವ್ಯಾಪಾರಿಗಳ ಮೂಲಕ ಔಷಧಿಗಳನ್ನು ವಿತರಿಸುವುದಾದರೂ, ಇತ್ತೀಚೆಗೆ ಸ್ವಿಗ್ಗಿ ಮತ್ತು ಇತರ ಡಿಜಿಟಲ್ ವೇದಿಕೆಗಳು ಔಷಧಿಗಳನ್ನು ಮನೆಬಾಗಿಲಿಗೆ ವಿತರಿಸಲು ಇದನ್ನು ದುರುಪಯೋಗ ಮಾಡುತ್ತಿವೆ ಎಂದು ಎಐಒಸಿಡಿಯ ಅಧ್ಯಕ್ಷ ಜೆ.ಎಸ್.ಶಿಂಧೆ ಮತ್ತು ಪ್ರಧಾನ ಕಾರ್ಯದರ್ಶಿ ರಾಜೀವ ಸಿಂಘಲ್ ಆಕ್ಷೇಪಿಸಿದ್ದಾರೆ. ಆನ್‌ಲೈನ್‌ಗಳ ಮೂಲಕ ಪ್ರಿಸ್ಕಿಪ್ಷನ್ ಇಲ್ಲದೆ ಔಷಧಿಗಳನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ಔಷಧಿಗಳು ದುರುಪಯೋಗ ಮತ್ತುಆ್ಯಂಟಿಮೈಕ್ರೋಬಿಯಲ್ ಪ್ರತಿರೋಧದಂತಹ ಗಂಭೀರ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಎಲ್ಲ ಅಕ್ರಮ ವೇದಿಕೆಗಳು ರೋಗಿಗಳ ಆರೋಗ್ಯ ಸುರಕ್ಷತೆ ಕಡೆಗಣಿಸಿ, ತಮ್ಮ ಲಾಭ ಮಾತ್ರ ಗಮನದಲ್ಲಿಡುತ್ತಿವೆ ಎಂದು ಅವರು ಆರೋಪಿಸಿದ್ದಾರೆ.

ಈ ಅಧಿಸೂಚನೆಯ ಮೂಲ ಉದ್ದೇಶವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಮಾತ್ರ ಲೈಸೆನ್ಸ್ ಹೊಂದಿರುವ ಸ್ಥಳೀಯ ಔಷಧಿ ವ್ಯಾಪಾರಿಗಳಿಂದ ಔಷಧಿಗಳ ವಿತರಣೆಯನ್ನು ಅನುಮತಿಸುವುದಾಗಿತ್ತು. ಆದರೆ, ಆನ್‌ಲೈನ್ ವೇದಿಕೆಗಳು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಔಷಧಿ ವಿತರಣೆಯ ನಿಯಮಗಳನ್ನು ಅವಗಣಿಸುತ್ತಿವೆ. ಇದರಿಂದ ಸಾರ್ವಜನಿಕ ಆರೋಗ್ಯಕ್ಕೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ದ.ಕ. ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಪರವಾಗಿ ಅಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮುಳುಗು ತಜ್ಞ ಈಶ್ವರ್ ಮಲ್ಪೆಗೆ ಮೂಲತ್ವ ವಿಶ್ವ ಪ್ರಶಸ್ತಿ

ಮಂಗಳೂರು, ಡಿ.27: ನಗರದ ಮೂಲತ್ವ ಫೌಂಡೇಶನ್ ಚಾರಿಟಬಲ್ ಟ್ರಸ್ಟ್‌ನ 10ನೇ ವರ್ಷದ ಮೂಲತ್ವ ವಿಶ್ವ ಪ್ರಶಸ್ತಿಗೆ ಉಡುಪಿಯ ಮುಳುಗು ತಜ್ಞ ಈಶ್ವರ್ ಮಲ್ಪೆ ಆಯ್ಕೆಯಾಗಿದ್ದಾರೆ.

ಶುಕ್ರವಾರ ನಗರದ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೂಲತ್ವ ಫೌಂಡೇಶನ್ ಚಾರಿಟಬಲ್ ಟ್ರಸ್ಟ್‌ನ ಸ್ಥಾಪಕ ಪ್ರಕಾಶ್ ಮೂಲತ್ವ, ಪ್ರಶಸ್ತಿ ಫಲಕದ ಜತೆಗೆ ಒಂದು ಲಕ್ಷದ ಒಂದು ರೂ. ನಗದು ನೀಡಲಾಗುತ್ತದೆ ಎಂದು ಮೂಲತ್ವ ಹೇಳಿದರು.

ಪ್ರಶಸ್ತಿ ಪ್ರದಾನ ಸಮಾರಂಭ ಡಿ.29ರಂದು ಬೆಳಗ್ಗೆ 10ಕ್ಕೆ ನಗರದ ಕೊಡಿಯಾಲ್ ಬೈಲ್‌ನ ಶಾರದಾ ವಿದ್ಯಾಲಯದ ಆಡಿಟೋರಿಯಂನಲ್ಲಿ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಟ್ರಸ್ಟಿ ಕಲ್ಪನಾ ಕೋಟ್ಯಾನ್, ಶೈನಿ, ಅಕ್ಷತಾ ಕದ್ರಿ, ಲಕ್ಷ್ಮೀಶ ಪಿ. ಕೋಟ್ಯಾನ್ ಹಾಗೂ ಸದಸ್ಯ ಮಹೇಶ್ ಅಮಿನ್ ಉಪಸ್ಥಿತರಿದ್ದರು.

ಟ್ರಾನ್ಸ್‌ಸ್ಟೀಲ್ ಸೀಟಿಂಗ್ ಟೆಕ್ನಾಲಜೀಸ್ ಅಮಿಟೆಡ್
CIN: U36109KA1995PLC017137
ನೋಂದಾಯಿತ ಕಚೇರಿ: ನಂ. 28, 4ನೇ ಮೈನ್, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು, ಕರ್ನಾಟಕ, ಭಾರತ-560022.
ವೆಬ್‌ಸೈಟ್: www.transteel.com | ಇ-ಮೇಲ್: compliance@transteel.com

ವಿಶೇಷ ಸರ್ವಸದಸ್ಯರ ಸಭೆ ಮತ್ತು ರಿಮೋಟ್ ಇ-ವೋಟಿಂಗ್ ಮಾಹಿತಿಯ ನೋಟಿಸ್

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯ ಸದಸ್ಯರ ವಿಶೇಷ ಸಾಮಾನ್ಯಸಭೆ (ಇಜಿಎಂ) ಬುಧವಾರ, ಜನವರಿ 22, 2025ರಂದು ಮಧ್ಯಾಹ್ನ 12:30 ಗಂಟೆಗೆ ವಿಡಿಯೊ ಕಾನ್ಪರೆನ್ಸಿಂಗ್/ ಇತರ ದೃಶ್ಯ-ಶ್ರವ್ಯ ವಿಧಾನ (ವಿಸಿ/ಒವಿಎಎಂ) ಮೂಲಕ ಇಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಿರುವ ವಿಶೇಷ ನಡಾವಳಿಗಳನ್ನು ನಿರ್ವಹಿಸುವ ಸಲುವಾಗಿ ನಡೆಯಲಿದೆ ಮತ್ತು

ಕಂಪನಿಗಳ ಕಾಯ್ದೆ-2013ರ (ಕಾಯ್ದೆ) ನಿಬಂಧನೆಗಳು ಮತ್ತು ಕಾರ್ಪೋರೆಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ: 14/2020 ದಿನಾಂಕ ಎಪ್ರಿಲ್ 08, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಎಪ್ರಿಲ್ 13, 2020 ಅನ್ವಯ ರೂಪಿಸಿದ ನಿಯಮಗಳು ಮತ್ತು ಆ ಬಳಿಕ ಹೊರಡಿಸಿದ ಸುತ್ತೋಲೆ (ಎಂಸಿಎ ಸುತ್ತೋಲೆಗಳು) 20/2020 ದಿನಾಂಕ ಮೇ 05, 2020, ಸುತ್ತೋಲೆ ಸಂಖ್ಯೆ 02/2021 ದಿನಾಂಕ ಜನವರಿ 13, 2021 ಮತ್ತು ಕಾರ್ಪೋರೆಟ್ ವ್ಯವಹಾರಗಳ ಸಚಿವಾಲಯದ ಎಲ್ಲ ಸೂಕ್ತ ಸುತ್ತೋಲೆಗಳಿಗೆ ಅನುಸಾರವಾಗಿ ಮತ್ತು ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಶರ್ ರಿಕ್ವಯರ್‌ಮೆಂಟ್ ರೆಗ್ಯುಲೇಶನ್ಸ್-2015 (ಲಿಸ್ಟಿಂಗ್ ರೆಗ್ಯುಲೇಶನ್ಸ್) ಮತ್ತು ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ದಿನಾಂಕ: ಮೇ 12, 2020ರಂದು ಹೊರಡಿಸಿದ (ಸೆಬಿ ಸುತ್ತೋಲೆಗಳು) ಸುತ್ತೋಲೆಗಳಿಗೆ ಅನುಸಾರವಾಗಿ ಇಜಿಎಂನಲ್ಲಿ ನಿಗದಿಪಡಿಸಿದ ನಡಾವಳಿಗಳನ್ನು ನಿರ್ವಹಿಸುವ ಸಲುವಾಗಿ ನಡೆಯಲಿದೆ. ಇಜಿಎಂಗೆ ವಿಸಿ/ ಒವಿಎಂ ಮೂಲಕ ಹಾಜರಾಗುವ ಸದಸ್ಯರನ್ನು ಕಾಯ್ದೆಯ ಸೆಕ್ಷನ್ 103ಕ್ಕೆ ಅನುಸಾರವಾಗಿ ಕೋರಂ ಉದ್ದೇಶಕ್ಕೆ ಪರಿಗಣಿಸಲಾಗುತ್ತದೆ.

ಮೇಲೆ ಹೆಸರಿಸಿದ ಸುತ್ತೋಲೆಗಳಿಗೆ ಅನುಸಾರವಾಗಿ ಕಂಪನಿಯು ಇಜಿಎಂ ನೋಟಿಸ್‌ಗಳನ್ನು ಎಲೆಕ್ಟ್ರಾನಿಕ್ ವಿಧಾನದಲ್ಲಿ ಡಿಸೆಂಬರ್ 27, 2024ರಂದು ಯಾರ ಹೆಸರುಗಳು ರಿಜಿಸ್ಟರ್ ಆಫ್ ಮೆಂಬರ್/ ರಿಜಿಸ್ಟರ್ ಆಫ್ ಬೆನಿಫಿಶಿಯಲ್ ಓನರ್‌ನಲ್ಲಿ ಇದೆಯೋ ಅವರೆಲ್ಲರಿಗೂ ಮತ್ತು ರಿಜಿಸ್ಟ್ರಾರ್ & ಟ್ರಾನ್ಸ್‌ಫರ್ ಏಜೆಂಟ್ (ಆರ್ & ಟಿ ಏಜೆಂಟ್) ಅಥವಾ ಆಯಾ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ (ಡೆಪಾಸಿಟರಿ) ನಲ್ಲಿ ತಮ್ಮ ಇ-ಮೇಲ್ ಐಡಿಗಳನ್ನು ನೋಂದಾಯಿಸಿದ ಎಲ್ಲ ಸದಸ್ಯರಿಗೆ ಕಳುಹಿಸಲಾಗಿದೆ. ಇಜಿಎಂ ನೋಟಿಸ್ ಕಂಪನಿಯ ವೆಬ್‌ಸೈಟ್: www.transteel.com ಮತ್ತು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್: www.nseindia.com ನಲ್ಲಿ ಕೂಡಾ ಲಭ್ಯವಿದೆ ಮತ್ತು ಇ-ಮತದಾನ ಸೌಲಭ್ಯವನ್ನು ಒದಗಿಸುವವರ ಅಂದರೆ ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ (ಬಿಗ್‌ಶೇರ್) ವೆಬ್‌ಸೈಟ್: https://ivote.bigshareonline.com ನಲ್ಲೂ ಲಭ್ಯವಿದೆ.

ಇ-ಮೇಲ್ ವಿಳಾಸಗಳನ್ನು ಅಪ್‌ಡೇಟ್ ಮಾಡುವ ವಿಧಾನ ಈ ಕೆಳಗಿನಂತಿದೆ:
ಡಿಮೆಟೀರಿಯಲೈಸ್ಡ್ ವಿಧಾನದಲ್ಲಿ ಸದಸ್ಯರು ಷೇರುಗಳನ್ನು ಹೊಂದಿದ್ದಲ್ಲಿ ಮತ್ತು ತಮ್ಮ ಇ-ಮೇಲ್ ವಿಳಾಸಗಳನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ನಲ್ಲಿ ನೋಂದಾಯಿಸದೇ/ ಪರಿಷ್ಕರಿಸದೇ ಇದ್ದಲ್ಲಿ ಅಂಥವರು ತಮ್ಮ ಇ-ಮೇಲ್ ವಿಳಾಸಗಳನ್ನು ತಮ್ಮ ಡಿಮ್ಯಾಟ್ ಖಾತೆಗಳನ್ನು ನಿರ್ವಹಿಸುವ ಆಯಾ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ನಲ್ಲಿ ನೋಂದಾಯಿಸಲು/ ಪರಿಷ್ಕರಿಸಲು ಕೋರಿದೆ.

ಎ). ಕಂಪನಿಯು ಇಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಿದ ವಿಷಯಗಳ ಬಗ್ಗೆ ಸದಸ್ಯರು ತಮ್ಮ ಮತಗಳನ್ನು ಇಜಿಎಂಗಿಂತ ಮೊದಲು ಚಲಾಯಿಸಲು ರಿಮೋಟ್ ಇ-ವೋಟಿಂಗ್ ಅಥವಾ ಇಜಿಎಂ ಅವಧಿಯಲ್ಲಿ ಮತ ಚಲಾಯಿಸಲು ಎಲೆಕ್ಟ್ರಾನಿಕ್ ವೋಟಿಂಗ್ ಸೌಲಭ್ಯವನ್ನು ಒದಗಿಸಿಕೊಟ್ಟಿದೆ. ಇಜಿಎಂಗೆ ಸೇರಲು ಮತ್ತು ಪಾಲ್ಗೊಳ್ಳಲು ಮತ್ತು ಮತದಾನ ಮಾಡುವ ಸೂಚನೆಗಳನ್ನು ಇಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಬಿ). ಷೇರುಗಳನ್ನು ಡಿಮೆಟೀರಿಯಲೈಸ್ಡ್ ವಿಧಾನದಲ್ಲಿ ಹೊಂದಿದ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದೇ ಇದ್ದಲ್ಲಿ ಅಂಥವರು ಇಜಿಎಂನಲ್ಲಿ ಎಲೆಕ್ಟ್ರಾನಿಕ್ ವಿಧಾನದಲ್ಲಿ ಮತ ಚಲಾಯಿಸಲು ಸೌಲಭ್ಯ ಕಲ್ಪಿಸಲಾಗಿದೆ.

ಸಿ). ರಿಜಿಸ್ಟರ್ ಆಫ್ ಮೆಂಬರ್ಸ್ ಅಥವಾ ರಿಜಿಸ್ಟರ್ ಆಫ್ ಬೆನಿಫಿಶಿಯಲ್ ಓನರ್ಸ್‌ನಲ್ಲಿ ತಮ್ಮ ಹೆಸರುಗಳನ್ನು ಕಟಾಫ್ ದಿನಾಂಕ ಅಂದರೆ ಬುಧವಾರ 15ನೇ ಜನವರಿ 2025ರ ಒಳಗೆ ನೋಂದಾಯಿಸಿದವರು ಮಾತ್ರವೇ ರಿಮೋಟ್ ಇ-ಮತದಾನ ಸೌಲಭ್ಯವನ್ನು ಪಡೆಯಲಿದ್ದಾರೆ ಅಥವಾ ಇಜಿಎಂನಲ್ಲಿ ಭಾಗವಹಿಸಲು ಮತ್ತು ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆ ಮೂಲಕ ಮತ ಚಲಾಯಿಸಲು ಅವಕಾಶವಿರುತ್ತದೆ.

ಡಿ). ರಿಮೋಟ್ ಇ-ಮತದಾನ ಅವಧಿಯು ಭಾನುವಾರ, 19ನೇ ಜನವರಿ 2025ರಂದು ಬೆಳಗ್ಗೆ 9:00 ಗಂಟೆಗೆ ಆರಂಭವಾಗುತ್ತದೆ ಮತ್ತು ಮಂಗಳವಾರ, 21ನೇ ಜನವರಿ 2025ರ (ಸಂಜೆ 5:00 ಗಂಟೆ, ಐಎಸ್‌ಟಿ) ವರೆಗೆ ಮುಕ್ತಾಯವಾಗುತ್ತದೆ.

ಇ). ಯಾವುದೇ ವ್ಯಕ್ತಿಗಳು ಇಜಿಎಂ ನೋಟಿಸ್ ವಿತರಿಸಿದ ಬಳಿಕ ಕಂಪನಿಯ ಸದಸ್ಯರದಲ್ಲಿ ಮತ್ತು ಕಟಾಫ್ ದಿನಾಂಕವಾದ ಬುಧವಾರ, 15ನೇಜನವರಿ 2025ಕ್ಕೆ ಮುನ್ನ ಷೇರುಗಳನ್ನು ಹೊಂದಿದ್ದಲ್ಲಿ, ಅಂಥವರು ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನಿಂದ ಸಹಾಯವಾಣಿ ಸಂಖ್ಯೆ 1800 2254ಕ್ಕೆ ಕರೆ ಮಾಡಿ ಅಥವಾ ivote.bigshareonline.com ಗೆ ಮೇಲ್ ಮಾಡುವ ಮೂಲಕ ಪಡೆಯಬಹುದು.

ಎಫ್). ಇದರ ಜತೆಗೆ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆ ಮೂಲಕ ಮತದಾನ ಸೌಲಭ್ಯವನ್ನು ಇಜಿಎಂನಲ್ಲಿ ಭಾಗವಹಿಸುವ ಸದಸ್ಯರಿಗೆ ಮತ್ತು ಈ ಮೊದಲು ರಿಮೋಟ್ ಇ-ಮತದಾನ ಮೂಲಕ ಮತ ಚಲಾಯಿಸದ ಸದಸ್ಯರಿಗೆ ಇಜಿಎಂ ನಡೆಯುವ ಅವಧಿಯಲ್ಲಿ ಕೂಡಾ ಲಭ್ಯವಾಗುವಂತೆ ಮಾಡಲಾಗಿದೆ.

ಜಿ). ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಕೂಡಾ ಇಜಿಎಂನಲ್ಲಿ ಭಾಗವಹಿಸಬಹುದು ಆದರೆ ಮತ್ತೆ ಇಜಿಎಂನಲ್ಲಿ ಮತದಾನ ಮಾಡಲು ಅವಕಾಶ ಇರುವುದಿಲ್ಲ.

ಎಚ್). ಯಾವ ಸದಸ್ಯರ ಹೆಸರು ಡೆಪಾಸಿಟರಿಗಳು ನಿರ್ವಹಿಸುವ ರಿಜಿಸ್ಟರ್ ಆಫ್ ಮೆಂಬರ್ಸ್ ಅಥವಾ ರಿಜಿಸ್ಟರ್ ಆಫ್ ಬೆನಿಫಿಶಿಯಲ್ ಓನರ್ಸ್‌ನಲ್ಲಿ ಕಟಾಫ್ ದಿನಾಂಕದೊಳಗೆ ನೋಂದಾಯಿಸಲ್ಪಟ್ಟಿರುವುದೋ ಅಂಥ ಸದಸ್ಯರಿಗೆ ಮಾತ್ರ ಇ-ಮತದಾನ ಸೌಲಭ್ಯ ಲಭ್ಯವಿರುತ್ತದೆ.

ಐ). ಈಗಾಗಲೇ ತಮ್ಮ ಇ-ಮೇಲ್ ವಿಳಾಸಗಳನ್ನು ಕಂಪನಿಯ ಬಳಿ/ಆರ್‌ಟಿಎ/ಡಿಪಿ ಬಳಿ ನೋಂದಾಯಿಸದೇ ಇದ್ದ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸುವ ವಿಧಾನವನ್ನು ಇಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಜೆ). ಮೇಲ್ವಿಚಾರಕರು ಮತ್ತು ಮಾತನಾಡುವವರ ನೋಂದಣಿ ಪ್ರಕ್ರಿಯೆಯ ವಿವರಗಳನ್ನು ಇಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಒಂದು ವೇಳೆ ಯಾವುದೇ ಸಂದೇಹಗಳಿದ್ದಲ್ಲಿ ನೀವು ಷೇರುದಾರರಿಗೆ ಇರುವ ಫ್ರೀಕ್ವೆಂಟ್ಲಿ ಆಸ್ಕ್‌ಡ್ ಕ್ವೆಶ್ಚನ್ಸ್ (ಎಫ್‌ಎಕ್ಯೂಗಳು) ಅನ್ನು ಪರಾಮರ್ಶಿಸಬಹುದು ಮತ್ತು ಇ-ಮತದಾನ ಬಳಕೆದಾರರ ಕೈಪಿಡಿ ಷೇರುದಾರರಿಗೆ https://ivote.bigshareonline.comನ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಲಭ್ಯವಿದೆ ಅಥವಾ ಸಹಾಯವಾಣಿ 18002254ಗೆ ಕರೆ ಮಾಡಬಹುದು ಅಥವಾ ivote.bigshareonline.comಗೆ ಇ-ಮೇಲ್ ಕಳುಹಿಸಬಹುದು.

ಸದಸ್ಯರು ಇಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಿರುವ ಎಲ್ಲ ಟಿಪ್ಪಣಿಗಳನ್ನು ಅದರಲ್ಲೂ ಮುಖ್ಯವಾಗಿ ಇಜಿಎಂ ಸೇರುವ ಸೂಚನೆಗಳು, ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸುವ ವಿಧಾನ ಅಥವಾ ಇಜಿಎಂ ವೇಳೆ ಮತ ಚಲಾಯಿಸುವ ವಿಧಾನದ ಬಗ್ಗೆ ಜಾಗ್ರತೆಯಿಂದ ಓದುವಂತೆ ಮನವಿ ಮಾಡಿಕೊಳ್ಳಲಾಗಿದೆ.

ಆಡಳಿತ ಮಂಡಳಿಯ ಆದೇಶಾನುಸಾರ
ಟ್ರಾನ್ಸ್‌ಸ್ಟೀಲ್ ಸೀಟಿಂಗ್ ಟೆಕ್ನಾಲಜೀಸ್ ಅಮಿಟೆಡ್ ಪರವಾಗಿ
ಸಹಿ/- ಶಿರಾಝ್ ಇಬ್ರಾಹಿಂ
ಸ್ಥಳ: ಬೆಂಗಳೂರು ಡಿಐಎನ್: 00812527
ದಿನಾಂಕ: ಡಿಸೆಂಬರ್ 27, 2024 ವ್ಯವಸ್ಥಾಪಕ ನಿರ್ದೇಶಕರು

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ ಹಾಸನ ಜಿಲ್ಲೆ.
Website:http//:channarayapatnatown.gov.in ದೂರವಾಣಿ: 08176-255411, 254544
Email:itstaff_ulb_channarayapatna@yahoo.co.in
ನಂ:ಪು.ಸ.ಚ./ಪಅ/ಟೆಂಡರ್/08/2024-25 ದಿನಾಂಕ: 26.12.2024

"ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ ಸ್ವಚ್ಛಭಾರತ್ ಮಿಷನ್ 2.0 ಅನುದಾನದ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ-ಪ್ರೊಕೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ-ಪ್ರೊಕೂರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಚನ್ನರಾಯಪಟ್ಟಣ ವೆಬ್‌ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಕಾಮಗಾರಿಯ ಹೆಸರು: Construction of Proposed 6TPD MRF Centre Material Recovery Facility of PEB Structure (PRIMARY and SECONDARY SHED) ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ 1.ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 26-12-2024 ರಿಂದ 10-01-2025 ರವರೆಗೆ. 2.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10-01-2025 ರಂದು ಸಂಜೆ 5.30 ರವರೆಗೆ. 3.ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 13-01-2025 ರಂದು ಬೆಳಿಗ್ಗೆ 11-00 ಗಂಟೆ ನಂತರ. ಕ್ರ, ಸಂ.ಇ-ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DMA/2023-24/BD/WORK_INDENT15621/CALL-3 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)78.50 ಇಎಂಡಿ ಮೊತ್ತ (ರೂ ಗಳಲ್ಲಿ)157000/-

ಸಹಿ/-ಶ್ರೀ ಕೆ ಎನ್ ಹೇಮಂತ) ಮುಖ್ಯಾಧಿಕಾರಿ,
ಪುರಸಭೆ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/782/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ವನ್ಯಜೀವಿ ಉಪ ವಿಭಾಗ, ದಾಂಡೇಲಿ-581325
email: acfwldandeli@gmail.com
ಕ್ರ.ಸಂ:ಸ.ಅ.ಸಂ/ಬಿಜಿಟಿ/ದಾಂಡೇಲಿ/ಇ-ಟೆಂಡರ್/ಸಿವಿಲ್/2024-25/588 ದಿನಾಂಕ: 21-12-2024

ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್) ಮೂಲಕ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ಉಪವಿಭಾಗ, ದಾಂಡೇಲಿ ವ್ಯಾಪ್ತಿಯಲ್ಲಿಯ ವಲಯಗಳಲ್ಲಿ ಸಿವಿಲ್ ಕಾಮಗಾರಿಗಾಗಿ ಇ-ಟೆಂಡರ್ ಪ್ರಕಟಣೆ.
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,ವನ್ಯಜೀವಿ ಉಪ ವಿಭಾಗದಲ್ಲಿ ಕುಳಗಿ ವನ್ಯಜೀವಿ ವಲಯದಲ್ಲಿ 2024-25 ನೇ ಸಾಲಿನ ಅನುಬಂಧ-1 ರಲ್ಲಿ ಕಾಣಿಸಿದಂತೆ Development & Maintenance Eco-Tourism Infrasturctures Kulgi Range- Nature camp Kulgi (Maintenance of Timber Trail Camp in Kulgi Nature Camp) ಕಾಮಗಾರಿಯ ಸಂಕ್ಷಿಪ್ತ ಅಲ್ಪಾವಧಿ ಇ-ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://Kppp.karnataka.gov.in ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕಚೇರಿಯಲ್ಲಿ 2024-25 ನೇ ಸಾಲಿನಲ್ಲಿ ನೊಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ವಿವರಗಳು & ಷರತ್ತುಗಳು ಈ ಕೆಳಗಿನಂತಿರುತ್ತವೆ.

Sl. No	Budget Head	Name of work	Range/ Name of the Locality	Unit cost per cottage (Lakhs)	Quantity (Ha./Nos/ Cum)	Amount required (in Lakhs)	EMD (2.5%)	Work Completion period
1	DATCF (Foundation)	Development & Maintenance Eco- Tourism Infrastructures Kulgi Range	Kulgi Nature Camp	6.00	3	18.00	45000.00	31-03-2025
		Total				18.00	45000.00	

(1) ಟೆಂಡರ ಪ್ರಶ್ನೆಗಳು / ಸ್ಪಷ್ಟೀಕರಣ ಕೊನೆಯ ದಿನಾಂಕ: 04-01-2025 ಮುಂಜಾನೆ 11.00 ಗಂಟೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06-01-2025 ಸಂಜೆ 4.00 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 07-01-2025 ಸಂಜೆ 4.30 ಗಂಟೆ
(4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 08-01-2025 ಸಂಜೆ 4.30 ಗಂಟೆ
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ, ದಾಂಡೇಲಿ.
DIPR/MNG/KSMCA/678/24-25 dt. 26.12.2024

ಎಲ್&ಟಿ ಫೈನಾನ್ಸ್ ಲಿಮಿಟೆಡ್
(ಈ ಹಿಂದೆ ಎಲ್&ಟಿ ಫೈನಾನ್ಸ್ ಹೋಲ್ಡಿಂಗ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ರಿಜಿಸ್ಟರ್ಡ್ ಆಫೀಸು: ಎಲ್&ಟಿ ಫೈನಾನ್ಸ್ ಲಿಮಿಟೆಡ್, ಬೃಂದಾವನ್ ಬಿಲ್ಡಿಂಗ್, ಪ್ಲಾಟ್ ನಂ. 177, ಕಲೀನಾ, ಸಿಎಸ್‌ಟಿ ರೋಡ್, ಮರ್ಸಿಡಿಸ್ ಶೋರೂಮ್‌ನ ಸಮೀಪ, ಸಾಂತಾಕ್ರೂಜ್ (ಪೂರ್ವ), ಮುಂಬಯಿ 400098.
CIN No.: L67120MH2008PLC181833
ಶಾಖೆ ಆಫೀಸ್: ಬೆಂಗಳೂರು
L&T Finance

ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಬಹಿರಂಗ ಹರಾಜು

ಎಲ್&ಟಿ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಕಂಪನಿಗೆ ಕೊಡಬೇಕಾದ ಬಾಕಿಗಳು ಮತ್ತು ಮುಂದಿನ ಬಡ್ಡಿ, ಚಾರ್ಜುಗಳು ಮತ್ತು ಖರ್ಚುಗಳು ಇತ್ಯಾದಿಯ ವಸೂಲಿಗಾಗಿ, ಸೆಕ್ಯುರಿಟೈಸೇಶನ್ ಆಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ [2002ರ 54] ಅಡಿಯಲ್ಲಿ ಮತ್ತು ಸದರಿ ಕಾಯಿದೆಯು ನೀಡುವ ಅಧಿಕಾರವನ್ನು ಚಲಾಯಿಸುತ್ತಾ, ಈ ಕೆಳಗಿನ ಪ್ರಾಪರ್ಟಿಯನ್ನು **''ಎಲ್ಲಿದೆಯೋ ಹೇಗಿದೆಯೋ ಆಧಾರದ ಮೇಲೆ''** ಮತ್ತು **''ಹೇಗಿದೆಯೋ ಯಾವ ಸ್ಥಿತಿಯಲ್ಲಿದೆಯೋ''** ಆಧಾರದ ಮೇಲೆ, **''ಸಾರ್ವಜನಿಕ ಇ-ಹರಾಜು''** ವಿಧಾನದ ಮೂಲಕ ಹರಾಜು ಮಾಡುತ್ತಿದ್ದಾರೆ.

ಸಾಲಗಾರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಯೂರ್ಡ್ ಪ್ರಾಪರ್ಟಿಯ ವಿಳಾಸ	ಲೋನ್ ಅಕೌಂಟ್ ನಂಬರ್ (ಗಳು)	ಭೌತಿಕ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ	ಮುಂಗಡ ಹಣ 10% ಅಥವಾ ಆರ್‌ಪಿಯಲ್ಲಿ ಯಾವುದು ಹೆಚ್ಚೊ ಅದು (ರೂ ಗಳಲ್ಲಿ)	17.04.2024 ರಂದಿನಂತೆ ಒಟ್ಟು ಬಾಕಿ	ರಿಜರ್ವ್ ಬೆಲೆ (ರೂ. ಗಳಲ್ಲಿ)	ಇನ್‌ಸ್ಪೆಕ್ಷನ್‌ನ ತಾರೀಖು	ಹರಾಜಿನ ತಾರೀಖುಮತ್ತು ಸಮಯ
1. ವೇಣುಗೋಪಾಲ ಚೌಧರಿ ಜಿ 2. ಲಹರಿ ವಿ 3. ಬನಶಂಕರಿ ರೆಸ್ಟೋರೆಂಟ್	ಆಸ್ತಿಯ ವಿಳಾಸ:- ಫ್ಲಾಟ್ ಸಂಖ್ಯೆ-203, ''ಎರಡನೇ ಮಹಡಿ, ಜೆಎಸ್ ಸನ್ ಫ್ಲವರ್'', ಸಿಐ ಸಂಖ್ಯೆ. 97/1ಬಿ & ಸಿಐ ಸಂಖ್ಯೆ. 98/2ಬಿ, ಬಿಬಿಎಂಪಿ ಕಥಾ ಸಂಖ್ಯೆ. 42/97/1ಬಿ, 98/2ಬಿ, 98/4, 98/5, ಆಸ್ತಿ ಸಂಖ್ಯೆ-42, ವಾರ್ಡ್ ಸಂಖ್ಯೆ-3 ಅನಂತಪುರ ಗ್ರಾಮ, ಯಲಹಂಕ ಹೋಬ್ಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-560064 ಆಸ್ತಿಯನ್ನು ಸುತ್ತುವರೆದ ಪ್ರದೇಶಗಳು: ಪೂರ್ವ – ಶ್ರೀ. ಜಗದೇಶ್‌ಗೆ ಸೇರಿದ ಭೂಮಿಯ ಉಳಿದ ಭಾಗ; ಪಶ್ಚಿಮ – ಶ್ರೀ. ನಾರಾಯಣಪ್ಪಗೆ ಸೇರಿದ ಆಸ್ತಿ; ಉತ್ತರ – ರಸ್ತೆ; ದಕ್ಷಿಣ – ಶ್ರೀ. ಎನ್ ಸಿ ಸತ್ಯಕುರ್ಮಾಗೆ ಸೇರಿದ ಆಸ್ತಿ	H13496291 220075000 & H13496291 220075000 L & H13496311 220074341	ಜನವರಿ 25, 2024	₹4,20,000	₹72,52,257.59	₹42,00,000	ಪೂರ್ವ ಅಪಾಯಿಂಟ್ಮೆಂಟ್ ನೊಂದಿಗೆ ಎಲ್ಲಾ ಕೆಲಸದ ದಿನದಂದು ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ	30.01.2025 ರಂದು ಮಧ್ಯಾಹ್ನ 12:00 ರಿಂದ ಮಧ್ಯಾಹ್ನ 2.00 ಗಂಟೆ

ಬಹಿರಂಗ ಹರಾಜಿನ ನಿಬಂಧನೆಗಳು ಮತ್ತು ಷರತ್ತುಗಳು

1. ಪಬ್ಲಿಕ್ ಇ-ಆಕ್ಷನ್ ಮೋಡ್ ನೆರವಿನಿಂದ ಮತ್ತು ಅದರ ಮೂಲಕ ಎಸ್‌ಎಆರ್‌ಎಫ್‌ಎಇಎಸ್‌ಐ SARFAESI ಕಾಯಿದೆಯ ಪ್ರಾವಧಾನಗಳ ಅಡಿಯಲ್ಲಿ ಕಂಪನಿಯ ಅಧಿಕೃತ ಅಧಿಕಾರಿಯವರು https://sarfaesi.E-auctiontiger.net ವೆಬ್‌ಸೈಟ್ ಮೂಲಕ ಆನ್‌ಲೈನ್ ಆಗಿ ಇ-ಹರಾಜು ಮಾರಾಟವನ್ನು ನಡೆಸುತ್ತಿದ್ದಾರೆ.
2. ಬಹಿರಂಗ ಇ-ಹರಾಜನ್ನು ಇದರಲ್ಲಿ ಮೇಲೆ ನಮೂದಿಸಲಾಗಿರುವ ದಿನಾಂಕ ಮತ್ತು ಸಮಯದಲ್ಲಿ ನಡೆಸಲಾಗುವುದಿದ್ದು, ಆಗ ಮೇಲೆ ನಮೂದಿಸಲಾದ ಭದ್ರತೆ ಪಡೆದ ಆಸ್ತಿಯನ್ನು **''ಹೇಗಿದೆಯೊ ಎಲ್ಲಿದೆಯೊ'' ಆಧಾರದಲ್ಲಿ ಮತ್ತು ''ಹೇಗಿದೆಯೊ ಏನಿದೆಯೊ'' ಸ್ಥಿತಿಯಲ್ಲಿ** ಮಾರಾಟ ಮಾಡಲಾಗುತ್ತದೆ.
3. ಬಹಿರಂಗ ಇ-ಹರಾಜಿನಲ್ಲಿ ಭಾಗವಹಿಸುವುದಕ್ಕಾಗಿ, ಉದ್ದೇಶ ಹೊಂದಿರುವ ಖರೀದಿದಾರರು/ಬಿಡ್ಡರ್‌ಗಳು ಭದ್ರತೆ ಪಡೆದ ಆಸ್ತಿಗಳ ರಿಸರ್ವ್ ಬೆಲೆಯ 10% ಆಗಿರುವ ಮರುಪಾವತಿ ಮಾಡಲ್ಪಡಬಹುದಾದ ಮುಂಗಡ ಹಣ ಠೇವಣಿಯ ಪಾವತಿಯ ವಿವರಗಳನ್ನು ಪ್ಯಾನ್ ಕಾರ್ಡ್, ಕಂಪೆನಿಯ ಪ್ರಸಂಗದಲ್ಲಿ ಬೋರ್ಡ್ ರೆಸೊಲ್ಯೂಶನ್ ಮತ್ತು ವಿಳಾಸದ ರುಜುವಾತಿನ ಪ್ರತಿಗಳೊಂದಿಗೆ 29/01/2025 ರಂದು ಅಥವಾ ಮೊದಲು ಸಲ್ಲಿಸಬೇಕು.
4. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಇತರ ಎಲ್ಲ ಬಿಡ್ಡರ್‌ಗಳ ಇಎಮ್‌ಡಿಯು ಎಲ್‌ಟಿಎಚ್‌ಎಫ್‌ಎಲ್‌ನಿಂದ ಬಹಿರಂಗ ಹಾರಾಜಿನ ಮುಕ್ತಾಯದ 7 ದಿನಗಳ ಒಳಗೆ ಮರುಪಾವತಿ ಮಾಡಲಾಗುತ್ತದೆ. ಇಎಮ್‌ಡಿ ಯಾವುದೇ ಬಡ್ಡಿಯನ್ನು ಗಳಿಸುವುದಿಲ್ಲ
5. ಯಶಸ್ವಿ ಖರೀದಿದಾರರು/ಬಿಡ್ಡರ್ ರು ಅವನ/ಅದರ ಆಫರ್‌ನ 25% (ಇಎಮ್‌ಡಿ ಒಳಗೊಂಡು)ಅನ್ನು ''ಎಲ್&ಟಿ ಫೈನಾನ್ಸ್ ಲಿಮಿಟೆಡ್'' ನ ಪರವಾಗಿ ಮುಂಬೈನಲ್ಲಿ ಪಾವತಿಯಾಗುವ ಡಿ.ಡಿ/ಪಿ.ಒ ದ ರೂಪದಲ್ಲಿ 30/01/2025 ರಲ್ಲಿ ಅಂದರೆ ಹರಾಜಿನ ದಿನ 18.00 ಗಂಟೆಗೆ ಮೊದಲು ಅಥವಾ ಮುಂದಿನ ಕೆಲಸದ ದಿನ ಅಂದರೆ 31/01/2025 ರಲ್ಲಿ ಜಮಾ ಮಾಡತಕ್ಕದ್ದು ಆ ಠೇವಣಿಯು ಎಲ್&ಟಿ ಫೈನಾನ್ಸ್ ಲಿಮಿಟೆಡ್ ನಿಂದ ದೃಢೀಕರಿಸಲ್ಪಡಬೇಕು, ಅದಕ್ಕೆ ತಪ್ಪಿದ್ದರೆ ಮಾರಾಟವು ವಿಫಲವಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಸದರಿ ಯಶಸ್ವಿ ಬಿಡ್ಡರ್‌ರ ಇಎಮ್‌ಡಿ ಮುಟ್ಟುಗೋಲು ಹಾಕಲ್ಪಡುತ್ತದೆ. ಉಳಿದ ಮೊತ್ತ ಅಂದರೆ ಪಾವತಿ ಮಾಡಬೇಕಾದ ಖರೀದಿ ಬೆಲೆಯ 75% ಅನ್ನು ಖರೀದಿದಾರರು ಎಲ್&ಟಿ ಫೈನಾನ್ಸ್ ಲಿಮಿಟೆಡ್‌ಗೆ ಸ್ಥಿರಾಸ್ತಿಯ ಮಾರಾಟದ 15ನೇ ದಿನದಂದು ಅಥವಾ ಮೊದಲು ಅಥವಾ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಅಂತಹ ವಿಸ್ತರಿತ ಅವಧಿಯೊಳಗೆ ಪಾವತಿ ಮಾಡಬೇಕು.
6. ಆಸ್ತಿಯ ಪರಿಶೀಲನೆ ಅಥವಾ ಹೆಚ್ಚು ಮಾಹಿತಿಗಾಗಿ, ಭಾವೀ ಬಿಡ್ಡರ್‌ಗಳು ಅಧಿಕೃತ ಅಧಿಕಾರಿ ಅಂದರೆ **''ಹೆಸರು - ಶ್ರೀ ಸತೀಶ ಆರ್, ಸಂಪರ್ಕ ಸಂಖ್ಯೆ. 9738141146, ಎಲ್ & ಟಿ ಫೈನಾನ್ಸ್ ಲಿಮಿಟೆಡ್, ನಂ. 92, ಜೆಡ್ ಸ್ಟ್ವೇರ್, ಜೆಎನ್‌ಸಿ ರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು, ಕರ್ನಾಟಕ-560 095 ಮತ್ತು ಸಂತೋಷ್ ತಿವಾರಿ, ಸಂಪರ್ಕದ ನಂ. 9920490126, ಎಲ್&ಟಿ ಫೈನಾನ್ಸ್ ಲಿಮಿಟೆಡ್, ಆಫೀಸ್: 6ನೇ ಮಹಡಿ, ಬೃಂದಾವನ್ ಬಿಲ್ಡಿಂಗ್, ಪ್ಲಾಟ್ ನಂ. 177, ಕಲೀನಾ, ಸಿಎಸ್‌ಟಿ ರೋಡ್, ಮರ್ಸಿಡೀಸ್ ಶೋರೂಮ್ ಸಮೀಪ, ಸಾಂತಾಕ್ರೂಜ್ (ಪೂರ್ವ), ಮುಂಬೈ - 400 098.** ಇ-ಹರಾಜಿನ ಯಾವುದೆ ಹಂತದಲ್ಲಿ ಅಧಿಕೃತ ಅಧಿಕಾರಿ ಬಿಡ್/ಆಫರ್ ಅನ್ನು ಸ್ವೀಕರಿಸಬಹುದು/ತಿರಸ್ಕರಿಸಬಹುದು/ ಬದಲಾಯಿಸಬಹುದು/ರದ್ದು ಮಾಡಬಹುದು ಅಥವಾ ಅದರ ಯಾವುದೇ ಕಾರಣವನ್ನು ಗೊತ್ತುಪಡಿಸದೆ ಮತ್ತು ಯಾವುದೇ ಪೂರ್ವ ನೋಟೀಸನ್ನು ನೀಡದೆ ಇ-ಹರಾಜನ್ನು ಮುಂದೂಡಬಹುದು.
7. ಯಶಸ್ವಿ ಖರೀದಿದಾರರು/ಬಿಡ್ಡರ್‌ರು ಅನ್ವಯವಿರುವ ಕಾನೂನಿನಿಗೆ ಅನುಸಾರವಾಗಿ ಅವನ/ಅವಳ /ಅದರ ಪರವಾಗಿ ಆಸ್ತಿಯ ಹಸ್ತಾಂತರ/ಒಪ್ಪಿಸುವಿಕೆಯ ಸಲುವಾಗಿ ಪಾವತಿ ಮಾಡುವ ಅಗತ್ಯವಿರುವ ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಫೀಜುಗಳು, ಸ್ಟಾಂಪ್‌ಡ್ಯೂಟಿ, ರಿಜಿಸ್ಟ್ರೇಶನ್ ಶುಲ್ಕಗಳು ಇತ್ಯಾದಿಗಳನ್ನು ಭರಿಸಬೇಕು.
8. ಸದರಿ ಸಲ್ಲತಕ್ಕ ಬಾಕಿಗಳಿಗೆ ಹೊಣೆಯಾಗಿರುವ ಸಾಲಗಾರರು/ಜಾಮೀನುದಾರರು ಈ ಮಾರಾಟದ ನೋಟೀಸನ್ನು ಮೇಲೆ ನಮೂದಿಸಿದ ಬಹಿರಂಗ ಇ-ಹರಜನ್ನು ನಡೆಸುವ ಕುರಿತು ಭದ್ರತೆಯ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ರ ಅಡಿಯಲ್ಲಿ ಇಂದು ನೋಟೀಸು ಎಂದು ಪರಿಗಣಿಸತಕ್ಕದ್ದು.
9. ಸಾಲ ಪಡೆದವರ(ರು)/ಸಹ-ಸಾಲ ಪಡೆದವ(ರು)/ಗ್ಯಾರಂಟರ್(ಗಳು)/ಮಾರ್ಟ್‌ಗೇಜರ್(ಗಳು), ಇವರಿಗೆ, ಮೇಲ್ಕಿಣಸಿದ ಬಾಕಿ ಇರುವ ಹಣವನ್ನು ಪೂರ್ತಿಯಾಗಿ, ನೀಡಲಾಗಿರುವ ಇ-ಹರಾಜಿನ ದಿನಾಂಕದ ಮೊದಲೇ ತೀರಿಸಬೇಕಾಗಿ ಈ ಮೂಲಕ ವಿನಂತಿಸಲಾಗುತ್ತದೆ. ಇದಕ್ಕೆ ತಪ್ಪಿದ್ದಲ್ಲಿ SARFAESI ಆ್ಯಕ್ಟ್ 2002ಯಲ್ಲಿ ವಿಧಿಸಲಾಗಿರುವ ಅವಕಾಶಗಳ ಅನುಸಾರ ಪ್ರಾಪರ್ಟಿಯನ್ನು ಮಾರಲಾಗುತ್ತದೆ.
10. ಸಾಲ ಪಡೆದವರ(ರು)/ಸಹ-ಸಾಲ ಪಡೆದವ(ರು)/ಗ್ಯಾರಂಟರ್(ಗಳು)/ಮಾರ್ಟ್‌ಗೇಜರ್(ಗಳು), ಇವರನ್ನು ಎಲ್&ಟಿ ಫೈನಾನ್ಸ್ ಲಿಮಿಟೆಡ್‌ನಿಂದ ಮುಂದಾಗಿ ಸಮ್ಮತಿಯನ್ನು ಪಡೆಯದೇ, ನೋಟಿಸಿನಲ್ಲಿ ಸೂಚಿಸಲಾಗಿರುವ ಜಾಮೀನಿನ ಸ್ವತ್ತನ್ನು ಮಾರಾಟ, ಲೀಸ್ ಅಥವಾ ಇನ್ನಿತರ ರೀತಿಯಲ್ಲಿ ಬೇರೆಯವರಿಗೆ ಹಸ್ತಾಂತರಿದಂತೆ ಪ್ರತಿಬಂಧಿಸಲಾಗಿದೆ.

ಸಹಿ ಮಾಡಲಾಗಿದೆ/-
ಅಧಿಕೃತ ಅಧಿಕಾರಿ
ಎಲ್&ಟಿ ಫೈನಾನ್ಸ್ ಲಿಮಿಟೆಡ್ ಪರವಾಗಿ
ದಿನಾಂಕ: 28.12.2024
ಸ್ಥಳ: ಬೆಂಗಳೂರು